ನ್ಯುಯೆನ್ ಥಿ ಥುಯ್ ಲಿನ್
ಬರೆದ ಎರಡು ಕವಿತೆಗಳು

# ನೇಲ್ ಸಲೂನಿನ ಬೆಕ್ಕು

ಬೂದು ಬೆಕ್ಕು,
ಸಲೂನಿನ ಬೂದು ನೆಲದ ಮೇಲೆ
ಅಂಗಾತ ಮಲಗಿದೆ,
ಅದರ ಅರೆ ತೆರೆದ ಕನಸುಗಣ್ಣು ಹೊರಳುವುದು
ಸಂಗೀತ ಹೊಮ್ಮುವ ಕಡೆಗೆ

ಮ್ಯಾನಿಕ್ಯೂರಿಸ್ಟ್★ ಆಗಷ್ಟೇ ಬಿಡಿಸಿ
ಮುಗಿಸಿದ್ದಳು ಬಿಳಿ ಮೋಡವನ್ನು
ಒರೆಸಿ ಹಾಕಿ
ಬದಲಿಸಿ ಬರೆಯುತ್ತಿದ್ದಾಳೆ ರಾತ್ರಿ ಆಕಾಶವ
ನೇರಳೆ ನೀಲ ಬಣ್ಣದ ಹಿನ್ನೆಲೆಯಲಿ

ಈ ಬೆರಳ ಮೇಲೆ ಬೆಕ್ಕಿನ ಕಣ್ಣಿನಂಥ ಚಿತ್ರ
ಆ ಬೆರಳ ಮೇಲೆ ಬೆಳ್ಳಿಯ ಅರ್ಧ ಚಂದ್ರನ ಬಿಂಬ
ಒಳಗೊಂದು ಮಿನುಗು ತಾರೆ

ಹಿಂಜರಿದೆ ನಾನು, ಕ್ಷಣಕಾಲ
ಬಣ್ಣಗಳ ಶೀತಲತೆಗೆ ಅಪರಿಚಿತಳಾಗಿ
ಅವಳ ಹೊಸ ಜಗತ್ತಿಗೆ ಅನ್ಯಳಾಗಿ

'ತುಸು ಬೆಳಕ ಸೇರಿಸಿ' ಎಂದೆನು ಮೆಲು ದನಿಯಲ್ಲಿ
ನನ್ನ ಪುಟ್ಟ ಬೆರಳುಗಳ ಮೇಲೆ
ಮೆಲ್ಲನೆ ಮೂಡಿ ಬರುತ್ತಿದ್ದ ನೇರಳೆ ನೀಲ ಆಕಾಶ
ತಲ್ಲೀನಳಾಗಿದ್ದ
ಅವಳ ಕಿವಿಗೆ ಬೀಳಲೇ ಇಲ್ಲ

ಕೈ ಉಜ್ಜಿ ಬೆಚ್ಚಗೆ ಮಾಡುತ್ತ
ಕಾಯುತ್ತಿದ್ದೆ ಆಕಾಶ ಒಣಗುವುದನ್ನು,
ಕ್ಷಣ ಚಕಿತಳಾದೆ
ಮೆಟ್ಟಿಲ ಬಿರುಕಿನಿಂದ ತೆವಳುತ್ತಾ ಹೊರಗಿಣುಕಿದ
ಒಂದು ಕೆಂಪು ಹೂವ ಕಂಡು

★ಉಗುರಿನ ಮೇಲೆ ಚಿತ್ರ ಬಿಡಿಸುವ ಕಲಾವಿದೆ



# ನಿನ್ನೊಡನೆ ಪ್ರತಿ ಮುಂಜಾವು

ಪ್ರತಿ ಮುಂಜಾವು ಎಚ್ಚರಗೊಳ್ಳುವೆ
ತೆಳುವಾದ ಮೋಡಗಳ ನಡುವೆ ರೆಕ್ಕೆ
ಬಡಿಯುತ್ತಾ

ಅಗೋಚರ ಸುಗಂಧಭರಿತ ವಾತ್ಸಲ್ಯದಲ್ಲಿ
ಸದಾ ಸುರಕ್ಷಿತಳಾಗಿರುವೆ ಎಂಬ ಭಾವ

ಭೂಗೋಳವನು ನಿಧಾನವಾಗಿ
ತಿರುಗಿಸುತ್ತಿದ್ದಂತೆ
ನಿನ್ನ ಮುಖವು ನನ್ನ ಸುತ್ತಲೂ
ತಿರುಗಲಾರಂಭಿಸುತ್ತದೆ

ಪುಸ್ತಕದ ಪುಟಗಳ ನಡುವೆ ಒತ್ತಿಟ್ಟ
ಹೂವಿನಂತಿರುವೆ,
ಹೂ ಗರ್ಭದೊಳಗೆ ಬಣ್ಣಗಳು ನಿಧಾನವಾಗಿ
ಒಳ ಸರಿಯುತ್ತಿರುವಾಗ

ನಿನ್ನನ್ನು ಕಾಣಲು ಮಳೆಯಾಗಿ
ಇಳಿಯುವೆನೋ ಎಂಬ ಕಲ್ಪನೆ
ಆ ಕ್ಷಣದಲ್ಲಿ ಒಣ ಮೋಡವೊಂದು ಬಂದು
ನನ್ನನ್ನು ಮತ್ತೆ
ಆವರಿಸಿಕೊಳ್ಳುತ್ತದೆ